ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ:ಹೆಚ್.ಆರ್.ಎಂ.ಎಸ್.ಸುತ್ತೋಲೆ-1/2017-18 ದಿನಾಂಕ:03.10.2017

**ಸುತ್ತೋಲೆ**

ವಿಷಯ: ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ ತಪ್ಪಾಗಿ ಜನರೇಟ್ ಆಗಿರುವ ಬಿಲ್ಲನ್ನು ಪರಿಶೀಲಿಸದೆ ರಿವರ್ಟ್ ಮಾಡಲು ನೀಡುತ್ತಿರುವ ಬಗ್ಗೆ.

ಉಲ್ಲೇಖ: ಈ ಕಛೇರಿ ಜ್ಞಾಪನ ಪತ್ರ ದಿನಾಂಕ: 01.09.2016.

&&&

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವೇತನ ಬಟವಾಡೆ ಅಧಿಕಾರಿಗಳು ವೇತನ ಬಿಲ್ಲನ್ನು ಜನರೇಟ್ ಮಾಡುವ ಸಂದರ್ಭದಲ್ಲಿ ಡ್ರಾಫ್ಟ್ ಬಿಲ್ಲನ್ನು ಪರಿಶೀಲಿಸದೆ ಅಂತಿಮ ವೇತನ ಬಿಲ್ಲನ್ನು ಸೆಳೆಯುತ್ತಿರುವುದರಿಂದ, ಕೆಲವು ಬಿಲ್ಲುಗಳು ತಪ್ಪಾಗಿ ಜನರೇಟ್ ಆಗುತ್ತಿವೆ. ಉಲ್ಲೇಖಿತ ಜ್ಞಾಪನದಲ್ಲಿ ಈಗಾಗಲೇ ತಿಳಿಸಿದಂತೆ ಹಲವಾರು ಬಾರಿ ಸಲಹೆ ಸೂಚನೆಗಳನ್ನು ನೀಡಲಾಗಿದ್ದರೂ ಸಹ ಬಟವಾಡೆ ಅಧಿಕಾರಿಗಳು ಇದುವರೆಗೂ ಯಾವುದೇ ಕ್ರಮ ವಹಿಸದೇ ಇರುವುದು ಕಂಡು ಬಂದಿರುತ್ತದೆ.

ಇಲ್ಲಿಯವರೆಗೂ ತಪ್ಪಾದ ಬಿಲ್ಲುಗಳನ್ನು ರಿವರ್ಟ್ ಮಾಡಲು ಡಿಡಿಓ ರಿಂದ ಹೆಚ್ಓಡಿ ಗೆ ಆನ್‌ಲೈನ್ ರಿಕ್ವೆಸ್ಟ್ ನೀಡಲು ಅವಕಾಶವಿತ್ತು. ಪ್ರಸ್ತುತ ಬಿಲ್ ರಿವರ್ಟ್ On line option ಅನ್ನು ಹೆಚ್.ಆರ್.ಎಂ.ಎಸ್. ತಂತ್ರಾಂಶದಿಂದ ತೆಗೆದುಹಾಕಲಾಗಿರುತ್ತದೆ. ಆದ ಕಾರಣ ಬಿಲ್ ಅಪ್ರೂವ್ ಮಾಡುವ ಮೊದಲು ಡ್ರಾಫ್ಟ್ ಬಿಲ್ಲನ್ನು ಸರಿಯಾಗಿ ಪರಿಶೀಲಿಸಿ ಮತ್ತು ಟೋಕನ್ ಸಂಖ್ಯೆಯನ್ನು ಖಚಿತಪಡಿಸಿಕೊಂಡು ನಂತರ ಬಿಲ್ ಅಪ್ರೂವ್ ಮಾಡಿಕೊಳ್ಳಲು ತಿಳಿಸಿದೆ. ಇನ್ನು ಮುಂದೆ ಬಿಲ್ ರಿವರ್ಟ್ ಕೋರಿಕೆ ಪತ್ರಗಳನ್ನು ಪುರಸ್ಕರಿಸಲಾಗುವುದಿಲ್ಲ ಹಾಗೂ ಮುಂದೆ ಜಾರಿಗೆ ಬರಲಿರುವ ಹೆಚ್.ಆರ್.ಎಂ.ಎಸ್.2.0 ತಂತ್ರಾಂಶದಲ್ಲಿ ಬಿಲ್ ರಿವರ್ಟ್ option ಗೆ ಅವಕಾಶವಿರುವುದಿಲ್ಲ.

ಆದ ಕಾರಣ ಡಿಡಿಓಗಳು ಖುದ್ದು ವೈಯಕ್ತಿಕ ಗಮನಹರಿಸಿ ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ ಬಿಲ್ ರಿವರ್ಟ್ ರಿಕ್ವೆಸ್ಟ್ ಅವಕಾಶಕ್ಕೆ ಎಡೆ ಮಾಡಿಕೊಡದೆ ಮಾಹಿತಿಗಳನ್ನು ಖಚಿತಪಡಿಸಿಕೊಂಡು ಬಿಲ್ಲುಗಳನ್ನು ತೆಗೆಯಲು ತಿಳಿಸಿದೆ. ತಪ್ಪಿದಲ್ಲಿ ಮುಂದಿನ ಎಲ್ಲಾ ಆಗು ಹೋಗುಗಳಿಗೆ ಸಂಬಂಧಪಟ್ಟ ವೇತನ ಸೆಳೆಯುವ/ವೇತನ ಬಟವಾಡೆ ಮಾಡುವ ಅಧಿಕಾರಿಗಳೇ ನೇರ ಹೊಣೆಗಾರರೆಂಬ ಅಂಶವನ್ನು ಮತ್ತೊಮ್ಮೆ ಸ್ಪಷ್ಟಪಡಿಸುತ್ತಾ, ಇನ್ನು ಮುಂದೆ ಸಕಾರಣವಿಲ್ಲದೆ ಪೇ ಬಿಲ್ ರಿವರ್ಟ್ ರಿಕ್ವೆಸ್ಟ್ ಸಲ್ಲಿಸಿದಲ್ಲಿ ಸಿಸಿಎ ನಿಯಮಾನುಸಾರ ಶಿಸ್ತು ಕ್ರಮಕ್ಕೆ ಪ್ರಸ್ತಾಪಿಸಲಾಗುವುದೆಂದು ತಿಳಿಯಪಡಿಸಿದೆ.

[ಎಸ್. ಕಾತ್ಯಾಯಿನಿದೇವಿ]
ಜಂಟಿ ನಿರ್ದೇಶಕರು [ಆಡಳಿತ]

ಗೆ:

1. ಅಪರ ಆಯುಕ್ತರು, ಸಾಶಿಇ, ಧಾರವಾಡ/ಕಲಬುರಗಿ ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಡಿಡಿಓಗಳಿಗೆ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರ ಮುಖಾಂತರ ಸೂಕ್ತ ಕ್ರಮಕ್ಕಾಗಿ.

\\10.96.135.22\e\d\hrms\sai ram\59_17.doc